ಕೋಲಾರಪತ್ರಿಕೆ

**Online Newspaper Clipping Service**

**Dtd- Saturday, 02nd August 2025**

**Page No. 01**

# ಜಾಲಪ್ಪ ಆಸ್ಪತ್ರೆಯಲ್ಲಿ ಹೊಸ ಕ್ಲಿನಿಕಲ್ ಸೇವೆ



ದೇವರಾಜ್ ಅರಸ್ ಅಕಾಡೆಮಿ ಹಾಗೂ ಆರ್.ಎಲ್ .ಜಾಲಪ್ಪ ಆಸ್ಪತ್ರೆಯಲ್ಲಿ ಹೊಸ ಕ್ಲಿನಿಕಲ್ ಸೇವೆಗಳನ್ನು ಸಂಸ್ಥೆಯ ಅಧ್ಯಕ್ಷ ಜಿ.ಎಚ್. ನಾಗರಾಜ ಆರಂಭಿಸಿದರು. ಜಾಲಪ್ಪ ನಾವೀನ್ಯತೆ ಮತ್ತು ಇನ್‌ಕ್ಯುಬೇಷನ್ ಕೇಂದ್ರವನ್ನು ರಾಜೇಶ್ ಜಗದಾಳೆ ಆರಂಭಿಸಿದರು. ಸಂಸ್ಥೆಯ ಉಪ ಕುಲಪತಿ ಡಾ॥ ವೆಂಗಮ್ಮ ಮತ್ತಿತರರು ಉಪಸ್ಥಿತರಿದ್ದರು.

ವಿಜಯ ಕರ್ನಾಟಕ



# ಹೊಸ ಕ್ಲಿನಿಕಲ್ ಸೇವೆಗಳ ಉದ್ಘಾಟನೆ



**ಕೋಲಾರ:** ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ ಹಾಗೂ ಆರ್. ಎಲ್. ಜಾಲಪ್ಪ ಆಸ್ಪತ್ರೆಯ ಹೊಸ ಕ್ಲಿನಿಕಲ್ ಸೇವೆಗಳ ಉದ್ಘಾಟನಾ ಸಮಾರಂಭವು ವಿಜೃಂಭಣೆಯಿಂದ ನಡೆಯಿತು.

ಆರ್.ಎಲ್.ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ವಯಸ್ಕರ ಲಸಿಕಾ ಕೇಂದ್ರ, ಡರ್ಮಟಾಲಜಿ ಪಿ. ಆರ್.ಪಿ ಲೇಸರ್ ಘಟಕ, ಹಿಸ್ಟೋಪಥಾಲಜಿ ಆಟೋಸ್ಟೈನರ್ ಮತ್ತು ಗ್ರೋಸಿಂಗ್ ಸ್ಟೇಷನ್, ರಕ್ತ ಬ್ಯಾಂಕ್ (ಐಎಚ್‌ಬಿಟಿ), ಬಂಜೆತನ ಚಿಕಿತ್ಸೆ ಕೇಂದ್ರ ಹಾಗೂ ಕ್ಲಿನಿಕಲ್ ಟ್ರಯಲ್ಸ್ ಸೆಂಟರ್‌ಗಳನ್ನು ಎಸ್.ಡಿ.ಯು.ಇ.ಟಿ ಅಧ್ಯಕ್ಷ ಜಿ.ಹೆಚ್. ನಾಗರಾಜ ಉದ್ಘಾಟಿಸಿದರು. ಇದೇ ವೇಳೆ ಜಾಲಪ್ಪ ಫೌಂಡೇಶನ್ ಫಾರ್ ಇನೋವೇಷನ್ ಅಂಡ್ ಇಂಕ್ಯುಬೇಶನ್ ಅನ್ನು ಎಸ್.ಡಿ.ಯು.ಇ.ಟಿ ಟ್ರಸ್ಟಿ ರಾಜೇಶ್ ಎನ್.ಜಗದಾಳೆ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಜಿ.ರಾಜೇಂದ್ರ, ಕಾರ್ಯದರ್ಶಿ ಕೆ.ಜಿ.ಹನುಮಂತರಾಜು, ಉಪಕುಲಪತಿ ಡಾ.ಬಿ.ವೆಂಗಮ್ಮ, ಮುಖ್ಯ ಆಡಳಿತಾಧಿಕಾರಿ ಡಾ.ಡಿ.ವಿ.ಎಲ್. ಎನ್.ಪ್ರಸಾದ್, ಕುಲಸಚಿವ ಡಾ.ಸಿ.ಮುನಿನಾರಾಯಣ, ಪ್ರಾಂಶುಪಾಲರಾದ ಡಾ.ಕೆ.ಪ್ರಭಾಕರ್, ವೈದ್ಯಕೀಯ ಅಧೀಕ್ಷಕ ಡಾ.ಜಿ.ಕೃಷ್ಣಪ್ಪ, ಸಂಶೋಧನೆ ಮತ್ತು ಅಭಿವೃದ್ಧಿ ಸೆಲ್ ನಿರ್ದೇಶಕ ಡಾ.ಆರ್.ಕಲ್ಯಾಣಿ, ಮುಖ್ಯ ಸಂಯೋಜಕಿ, ಸಿಟಿಸಿ ಡಾ. ಕೆ.ಭುವನಾ, ಮುಖ್ಯ ಸಂಯೋಜಕಿ, ಐಐಸಿ ಡಾ. ಅಶ್ವಿನಿ ಎನ್.ಎಸ್ ಹಾಗೂ ಇತರರು ಉಪಸ್ಥಿತರಿದ್ದರು.